ಕೆ.ಡಿ.ಪಿ. ಸಭೆಗಳ ಕುರಿತು

2028 - ಶ್ರೀ ರಾಜಶೇಖರ್ ವಿ. ಶೀಲವಂತ (ಗುಳೇದಗುಡ್ಡ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ ಡಿ ಪಿ (ಕರ್ನಾಟಕ ಅಭಿವೃದ್ಧಿ ಯೋಜನೆ) ತ್ರೈಮಾಸಿಕ ಸಭೆಗಳನ್ನು ಯಾವ ದಿನಾಂಕದಂದು ಕರೆಯಲಾಗುತ್ತದೆ?

ಆ) ಎರಡಕ್ಕಿಂತ ಹೆಚ್ಚು ತಾಲ್ಲೂಕಿನ ಹಳ್ಳಿಗಳನ್ನು ಒಳಗೊಂಡ ವಿಧಾನಸಭಾ ಸದಸ್ಯರಿಗೆ ಕೆ.ಡಿ.ಪಿ.ಸಭೆಗೆ ಹಾಜರಾಗಲು ಸರಕಾರ ಯಾವ ರೀತಿ ಅನುಕೂಲ ಕಲ್ಪಿಸಿದೆ?

ಇ) ಗುಳೇದಗುಡ್ಡ ಮತಕ್ಷೇತ್ರ ಮೂರು ತಾಲ್ಲೂಕಿನ ಹಳ್ಳಿಗಳನ್ನು ಒಳಗೊಂಡಿದ್ದು ಶಾಸಕರು ಒಂದೇ ದಿನ ಮೂರು ಸಭೆಗೆ ಹಾಜರಾಗಲು ಸಾಧ್ಯವೇ?

ಈ) ಸರ್ಕಾರ ಈ ಸಮಸ್ಯೆಗೆ ಯಾವ ರೀತಿ ಪರಿಹಾರ ಸೂಚಿಸುತ್ತದೆ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು, ಯೋಜನೆ ಮತ್ತು ಕಾರ್ಮಿಕ ಸಚಿವರು) :

ಅ) ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಚಿಸಲಾಗಿರುವ ತ್ರೈಮಾಸಿಕ ಪರಿಶೀಲನಾ ಸಮಿತಿಗಳು ಕನಿಷ್ಠ ಪಕ್ಷ ಮೂರು ತಿಂಗಳಿಗೊಮ್ಮೆ ಸಭೆಗಳನ್ನು ನಡೆಸಬೇಕಾಗಿರುವುದರಿಂದ ಸರ್ಕಾರವು ಸಭೆಗಳನ್ನು ನಡೆಸಲು ನಿರ್ದಿಷ್ಟವಾಗಿ ಯಾವ ದಿನಾಂಕವನ್ನು ನಿಗದಿಪಡಿಸಿರುವುದಿಲ್ಲ.

ಆ) (ಅ) ಭಾಗದ ಪ್ರಶ್ನೆಗೆ ಉತ್ತರ ನೀಡಿರುವನ್ವಯ ತಾಲ್ಲೂಕುಮಟ್ಟದ ತ್ರೈಮಾಸಿಕ ಸಮಿತಿಗಳು ಸಭೆ ನಡೆಸಲು ಸರ್ಕಾರವು ನಿರ್ದಿಷ್ಟವಾಗಿ ಯಾವ ದಿನಾಂಕವನ್ನು ನಿಗದಿಪಡಿಸಿಲ್ಲದ ಕಾರಣ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) (ಅ) ಮತ್ತು (ಆ) ಭಾಗಗಳ ಪ್ರಶ್ನೆಗೆ ಉತ್ತರಗಳನ್ನು ನೀಡುವ ಪ್ರಕಾರ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) (ಅ) ಮತ್ತು (ಆ) ಭಾಗಗಳ ಪ್ರಶ್ನೆಗೆ ಉತ್ತರಗಳನ್ನು ನೀಡಿರುವ ಪ್ರಕಾರ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರತಿ ಶಾಸಕರ ಕ್ಷೇತ್ರಕ್ಕೆ ಅಭಿವೃದ್ಧಿ ಕಾರ್ಯಗಳಿಗಾಗಿ ನೀಡುವ ಹಣ

2029 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವರ್ಷಕ್ಕೆ ಪ್ರತಿ ಶಾಸಕರ ಕ್ಷೇತ್ರಕ್ಕೆ ಲೋಕೋಪಯೋಗಿ ಇಲಾಖೆಯಿಂದ ಒದಗಿಸಲಾಗುವ 30 ಲಕ್ಷ ರೂಪಾಯಿಗಳನ್ನು ಲೋಕೋಪಯೋಗಿ ಇಲಾಖೆಯ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಬೇಕೆಂಬುದು ನಿಜವೇ?

ಅ) *ಗ್ರಾಮಾಂತರ ಕ್ಷೇತ್ರಗಳಲ್ಲಿ ಈ ಹಣವನ್ನು ಲೋಕೋಪಯೋಗಿ ಇಲಾಖೆಯ ಅಭಿವೃದ್ಧಿಗಳಿಗೆ ಉಪಯೋಗಿಸಲಾಗುತ್ತಿದೆಯೇ ಅಥವಾ ಬೇರೆ ಇಲಾಖೆಯ ಅಭಿವೃದ್ಧಿ ಕೆಲಸಗಳಿಗೆ ಉಪಯೋಗಿಸಲಾಗಿದೆಯೇ?*

ಆ) *ಹಾಗಾದಲ್ಲಿ, ಈ ಹಣವನ್ನು ನಗರ ಪ್ರದೇಶಗಳಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದಂತೆ ನಗರ ಪಾಲಿಕೆಗೆ ಸಂಬಂಧಿಸಿದ ಅಭಿವೃದ್ಧಿ ಕಾರ್ಯಗಳಿಗೆ ಬಳಸಲು ಅನುಮತಿಸಲಾಗುವುದೇ?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹೌದು. ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ (ಆಯವ್ಯಯದಲ್ಲಿ ಮಂಜೂರಾದ) ರಸ್ತೆಗಳ ಅಭಿವೃದ್ಧಿಗೆ ಮಾತ್ರ ಉಪಯೋಗಿಸಲಾಗುತ್ತಿದೆ.

ಆ) ಸದರಿ ಹಣವನ್ನು ಆಯವ್ಯಯದಲ್ಲಿ ಸೇರಿರುವ ಲೋಕೋಪಯೋಗಿ ಇಲಾಖೆಯ ಅಭಿವೃದ್ಧಿಗೆ ಮಾತ್ರ ಉಪಯೋಗಿಸಲಾಗುತ್ತಿದೆ. ಈ ಹಣದಲ್ಲಿ ಬೇರೆ ಇಲಾಖೆಯ ಕೆಲಸಗಳನ್ನು ಕೈಗೊಂಡಿಲ್ಲ.

ಇ) ಇಲ್ಲ.

ದ. ಕನ್ನಡ ಜಿಲ್ಲೆಯಲ್ಲಿ ಮೀನು ಮರಿಗಳನ್ನು ವಿತರಿಸುವ ಬಗ್ಗೆ ಕುರಿತು

2030 - ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೀನುಗಾರಿಕಾ ಇಲಾಖೆ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಮೀನು ಮರಿಗಳನ್ನು ವಿತರಿಸಿರುತ್ತದೆ?*

ಆ) *ಇದರಿಂದ ಸರ್ಕಾರಕ್ಕೆ ಬರುವ ಆದಾಯವೆಷ್ಟು?*

ಇ) *ಈ ಬಗ್ಗೆ ಸರ್ಕಾರವು ಮಾಡಿರುವ ಖರ್ಚು ಎಷ್ಟು?*

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯ ಈ ಕೆಳಗೆ ನಮೂದಿಸಿದ ತಾಲ್ಲೂಕುಗಳಲ್ಲಿ 96-97ನೇ ಸಾಲಿನಲ್ಲಿ ಅದರ ಮುಂದೆ ಸೂಚಿಸಿದ ಪ್ರಮಾಣದಲ್ಲಿ ಮೀನುಮರಿಗಳನ್ನು ವಿತರಿಸಲಾಗಿದೆ.

ತಾಲ್ಲೂಕು	ವಿತರಿಸಿದ ಮೀನುಮರಿಗಳ ಸಂಖ್ಯೆ
1) ಮಂಗಳೂರು	48.200
2) ಬಂಟ್ವಾಳ	6,750